4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೆಳಗಾವಿ ಇವರ ನ್ಯಾಯಾಲಯದಲ್ಲಿ,
ಮುಕ್ಕಾಂಃ ಬೆಳಗಾವಿ.

ಸೆಷನ್ಸ ಕೇಸ್ ನಂಃ 157/2023

1) ಕರ್ನಾಟಕ ಸರ್ಕಾರದ ಪರವಾಗಿ ಮಾಳಮಾರುತಿ ಪೊಲೀಸ್ ಠಾಣೆ, ಬೆಳಗಾವಿ.
ಪ್ರತಿನಿಧಿಸುವವರು ಸರ್ಕಾರಿ ಅಭಿಯೋಜಕರು

--- ಫಿರ್ಯಾದಿ

ವಿರುದ್ಧ

1) ಕುಲಕುಲಾ ದಾದು ಚೌಗುಲೆ
ವಯಸ್ಸುಃ 19 ವರ್ಷ, ಉಃ ಕೂಲಿ

4) ಶಿವರಾಮಾ ದೆಡೆ ಉರ್ಫ್ ಚೌಗುಲೆ
ವಯಸ್ಸುಃ 25 ವರ್ಷ, ಉಃ ಮೆಕ್ಯಾನಿಕ

5) ಡಾನ ಮೆತಾಜಿ ಚೌಗುಲೆ
ವಯಸ್ಸುಃ 38 ವರ್ಷ, ಉಃ ಆಟೋ ಚಾಲಕ

7) ಸುನೀಲ ಮೆತಾಜಿ ಚೌಗುಲೆ
ವಯಸ್ಸುಃ 32 ವರ್ಷ, ಉಃ ಆಟೋ ಚಾಲಕ

8) ಲಕ್ಷ್ಮಣ ಗೋಪಾಲ ದೇಡೆ ಅಲಿಯಾಸ ಚೌಗುಲೆ
ವಯಸ್ಸುಃ 46 ವರ್ಷ, ಉಃ ಆಟೋ ಚಾಲಕ

9) ಗಣೇಶ ಲಕ್ಷ್ಮಣ ದೇಡೆ ಅಲಿಯಾಸ ಚೌಗಲೆ
ವಯಸ್ಸುಃ 25 ವರ್ಷ, ಉಃ ಕೂಲಿ

10) ವಿನಾಯಕ ರಂದವಾ ಸಕಟ
ವಯಸ್ಸುಃ 25 ವರ್ಷ, ಉಃ ಆಟೋ ಚಾಲಕ

11) ಗಣಪತ ರಾಮಾ ದೇಡೆ ಅಲಿಯಾಸ ಚೌಗಲೆ
ವಯಸ್ಸುಃ 26 ವರ್ಷ, ಉಃ ಕೂಲಿ

12) ಆದಿ ಡಾನ ಚೌಗಲೆ
ವಯಸ್ಸುಃ 19 ವರ್ಷ, ಉಃ ಕೂಲಿ

13)　ಪ್ರೇಮ ಡಾನ ಚೌಗಲೆ
ವಯಸ್ಸುಃ 19 ವರ್ಷ, ಉಃ ಕೂಲಿ

14)　ರೂಪೇಶ ಖನ್ನಾ ಚೌಗಲೆ
ವಯಸ್ಸುಃ 21 ವರ್ಷ, ಉಃ ಕೂಲಿ

15)　ಕಿರಣ ದಾದಾ ಅಲಿಯಾಸ ದಾದು ಚೌಗಲೆ
ವಯಸ್ಸುಃ 35 ವರ್ಷ, ಉಃ ಕೂಲಿ
ಎಲ್ಲರೂ ಸಾಃ ಗ್ಯಾಂಗವಾಡಿ, ಬೆಳಗಾವಿ

– – – ಆರೋಪಿತರು

## ದೋಷಾರೋಪಣೆ

ನಾನು ಮೋಹನ ಪ್ರಭು, ಎಂ.ಎ. ಎಲ್.ಎಲ್.ಎಂ. 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೆಳಗಾವಿ ಈ ಮೂಲಕ ಆರೋಪಿತನಾದ

ಕುಲಕುಲಾ ದಾದು ಚೌಗುಲೆ
ವಯಸ್ಸುಃ 19 ವರ್ಷ, ಉಃ ಕೂಲಿ
ಸಾಃ ಗ್ಯಾಂಗವಾಡಿ, ಬೆಳಗಾವಿ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ–

ದಿನಾಂಕ 09.05.2019 ರಂದು ರಾತ್ರಿ 11–30 ಗಂಟೆ ಸಮಯಕ್ಕೆ ಮಾಳಮಾರುತಿ ಪೊಲೀಸ ಠಾಣಾ ವ್ಯಾಪ್ತಿಯ ಬೆಳಗಾವಿ ಗ್ಯಾಂಗವಾಡಿಯಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಈ ಹಿಂದೆ ದಾಖಲಾದ ಕ್ರಿಮಿನಲ್ ಪ್ರಕರಣಗಳ ಹಿನ್ನೆಲೆಯಲ್ಲಿ ಪಿರ್ಯಾದಿಯ ಮೇಲೆ ಸಿಟ್ಟು ಹೊಂದಿ ನೀವು ಕೃತ್ಯ ನಡೆಸುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಕೈಗಳಲ್ಲಿ ಮಾರಾಕಾಸ್ತ್ರ ಹಿಡಿದು ಪಿರ್ಯಾದಿಯ ಜೊತೆ ಜಗಳ ತೆಗೆದು ದೊಂಬಿ ಮಾಡಿ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಏಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಏಕೋದ್ದೇಶದಿಂದ ಈ ಹಿಂದೆ ದಾಖಲಾದ ಕ್ರಿಮಿನಲ್ ಪ್ರಕರಣಗಳ ಹಿನ್ನೆಲೆಯಲ್ಲಿ ಪಿರ್ಯಾದಿಯ ಮೇಲೆ ಸಿಟ್ಟು ಹೊಂದಿ ನೀವು ಕೃತ್ಯ ನಡೆಸುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಕೈಗಳಲ್ಲಿ ಮಾರಾಕಾಸ್ತ್ರ ಹಿಡಿದು ಪಿರ್ಯಾದಿಯ ಜೊತೆ ಜಗಳ ತೆಗೆದು ದೊಂಬಿ ಮಾಡಿ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಏಕೋದ್ದೇಶದಿಂದ ಈ ಹಿಂದೆ ದಾಖಲಾದ ಕ್ರಿಮಿನಲ್ ಪ್ರಕರಣಗಳ ಹಿನ್ನೆಲೆಯಲ್ಲಿ ಪಿರ್ಯಾದಿಯ ಮೇಲೆ ಸಿಟ್ಟು ಹೊಂದಿ ನೀವು ಕೃತ್ಯ ನಡೆಸುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಕೈಗಳಲ್ಲಿ ಮಾರಾಕಾಸ್ತ್ರ ಹಿಡಿದು ಪಿರ್ಯಾದಿಯ ಜೊತೆ ಜಗಳ ತೆಗೆದು ದೊಂಬಿ ಮಾಡಿ ನೀವು ಭಾರತೀಯ ದಂಡ ಸಂಹಿತೆ ಕಲಂ 148 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಗ್ಯಾಂಗವಾಡಿಯ ಮಹಾಂತೇಶ ಮೆಸ್ ನಲ್ಲಿ ಊಟ ಕಟ್ಟಿಸಿಕೊಂಡು ಬರಲು ತನ್ನ ಆಟೋ ರಿಕ್ಷಾದಲ್ಲಿ ಹೋದ ಪಿರ್ಯಾದಿಯು ರಸ್ತೆಯ ಬದಿಗೆ ಆಟೋ ರಿಕ್ಷಾ ನಿಲ್ಲಿಸಿ ಕೆಳಗೆ ಇಳಿದು ಮೆಸ್ ಗೆ ಹೋಗುತ್ತಿರುವಾಗ ಆರೋಪಿತರಾದ ನೀವು ಪಿರ್ಯಾದಿದಾರನ ಜೊತೆ ಜಗಳ ತೆಗೆದು ಪಿರ್ಯಾದಿಗೆ ಅವಾಚ್ಯ ಶಬ್ದದಿಂದ ಬೈಯ್ದು

ಅವಮಾನಪಡಿಸಿ ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಏಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಪಿರ್ಯಾದಿಯ ಜೊತೆ ಜಗಳ ಮಾಡಿ ಪಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನನ್ನು ಎಳೆದಾಡಿ ಕೈ ಮುಷ್ಠಿಯಿಂದ ಪಿರ್ಯಾದಿದಾರನಿಗೆ ಹೊಡೆದು ಸಾದಾ ಸ್ವರೂಪದ ಗಾಯಪಡಿಸಿ ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಏಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಪಿರ್ಯಾದಿಯ ಜೊತೆ ಜಗಳ ಮಾಡಿ ಪಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನಿಗೆ ಕಲ್ಲಿನಿಂದ ತಲೆಗೆ ಮುಖಕ್ಕೆ ಹೊಡೆದು ಸಾದಾ ಸ್ವರೂಪದ ಗಾಯಪಡಿಸಿದ್ದು ಜಗಳ ಬಿಡಿಸಲು ಬಂದ ಚಾಸಾ-4 ಪ್ರೀತಂ ಜಯಪಾಲ ಲೋಂಡೆ ಮತ್ತು ಚಾಸಾ-5 ಬೀನಾಬಾಯಿ ಕೋಂ. ಮಜೀದ ಚೌಗಲೆ ಇವರಿಗೂ ಕಲ್ಲಿನಿಂದ ಸಲೆಗೆ ಹೊಡೆದು ಸಾದಾ ಗಾಯಪಡಿಸಿ ಭಾರತೀಯ ದಂಡ ಸಂಹಿತೆ ಕಲಂ 324 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಏಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಪಿರ್ಯಾದಿಯ ಜೊತೆ ಜಗಳ ಮಾಡಿ ಪಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನನ್ನು ಎಳೆದಾಡಿ ಕೈ ಮುಷ್ಠಿಯಿಂದ ಮತ್ತು ಕಲ್ಲಿನಿಂದ

ಪಿರ್ಯಾದಿದಾರನ ತಲೆಗೆ, ಮುಖಕ್ಕೆ ಹೊಡೆದು ಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿ ಭಾರತೀಯ ದಂಡ ಸಂಹಿತೆ ಕಲಂ 307 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಪಿರ್ಯಾದಿಯ ಜೊತೆ ಜಗಳ ಮಾಡಿ ಪಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನಿಗೆ ಹೊಡೆದು ಗಾಯಪಡಿಸಿ ಜಗಳ ಬಿಡಿಸಲು ಬಂದ ಚಾಸಾ-4 ಮತ್ತು 5 ರವರಿಗೂ ಹೊಡೆದು ಗಾಯಗೊಳಿಸಿ ನಂತರ ಓಣಿಯಲ್ಲಿ ಹೋಗಿ ಚಾಸಾ-7 ಸವಿತಾ ವಿಜಯೇಂದ್ರ ಲೋಂಡೆ ಇವರ ಮನೆಗೆ ಅತಿಕ್ರಮಣ ಪ್ರವೇಶ ಮಾಡಿ ಮನೆಯಲ್ಲಿ ಇದ್ದ ಟಿವಿ ಒಡೆದು ಭಾರತೀಯ ದಂಡ ಸಂಹಿತೆ ಕಲಂ 448 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಪಿರ್ಯಾದಿಯ ಜೊತೆ ಜಗಳ ಮಾಡಿ ಪಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನಿಗೆ ಹೊಡೆದು ಗಾಯಪಡಿಸಿ ಜಗಳ ಬಿಡಿಸಲು ಬಂದ ಚಾಸಾ-4 ಮತ್ತು 5 ರವರಿಗೂ ಹೊಡೆದು ಗಾಯಗೊಳಿಸಿ ನಂತರ ಓಣಿಯಲ್ಲಿ ಹೋಗಿ ಚಾಸಾ-7 ಸವಿತಾ ವಿಜಯೇಂದ್ರ ಲೋಂಡೆ ಇವರ ಮನೆಗೆ ಅತಿಕ್ರಮಣ ಪ್ರವೇಶ ಮಾಡಿ ಮನೆಯಲ್ಲಿ ಇದ್ದ ಟಿವಿ ಒಡೆದು ನಷ್ಟ ಉಂಟು ಮಾಡಿ ನಂತರ ರಸ್ತೆಯ ಬದಿಗೆ ನಿಲ್ಲಿಸಿದ ಚಾಸಾ-8 ಶ್ರೀಮತಿ ಅನುರಾಧಾ ಧೀರಜ ಚೌಗಲೆ ಈಕೆಯ ಗಂಡನ ಆಟೋ ರಿಕ್ಷಾ ನಂ.ಕೆಎ-22-ಬಿ-7267 ಮತ್ತು ಚಾಸಾ-9 ಗೀತಾ ಜುಮನಾ ಲೋಂಡೆ ಈಕೆಯ ಗಂಡನ ಆಟೋ ರಿಕ್ಷಾ ನಂ.ಕೆಎ-22-

ಎ–9306 ಇದರ ಮುಂದಿನ ಗ್ಲಾಸಗಳನ್ನು ಕಲ್ಲಿನಿಂದ ಒಗೆದು ಗ್ಲಾಸ ಒಡೆದು ಹಾಕಿ ಸುಮಾರು 6,000/– ರೂ. ನಷ್ಟ ಉಂಟು ಮಾಡಿ ಭಾರತೀಯ ದಂಡ ಸಂಹಿತೆ ಕಲಂ 427 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಂದು ಆರೋಪಿತರಾದ ನೀವು ಅಕ್ರಮ ಕೂಟದ ಸದಸ್ಯರಾಗಿ ಏಕೋದ್ದೇಶದಿಂದ ಫಿರ್ಯಾದಿಯ ಜೊತೆ ಜಗಳ ಮಾಡಿ ಫಿರ್ಯಾದಿಗೆ ಕೊಲೆ ಮಾಡುವ ಉದ್ದೇಶದಿಂದ ಆತನಿಗೆ ಹೊಡೆದು ಗಾಯಪಡಿಸಿ ಜಗಳ ಬಿಡಿಸಲು ಬಂದ ಚಾಸಾ–4 ಮತ್ತು 5 ರವರಿಗೂ ಹೊಡೆದು ಗಾಯಗೊಳಿಸಿ ನೀವು ಅವರಿಗೆ ಕೊಲೆ ಬೆದರಿಕೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿದ್ದೀರಿ.

ಈ ಮೇಲಿನ ಅಪರಾಧಗಳಿಗೆ ನೀನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಬೇಕು ಅಂತಾ ಈ ಮೂಲಕ ಆದೇಶಿಸುತ್ತೇನೆ.

( ತೆರೆದ ನ್ಯಾಯಾಲಯದಲ್ಲಿ ದಿನಾಂಕ ರಂದು ನಿನ್ನ ಮೇಲೆ ಈ ಮೇಲಿನ ದೋಷಾರೋಪಣೆಯನ್ನು ಹೊರಿಸಲಾಯಿತು.)

(ಮೋಹನ ಪ್ರಭು)
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.